52) ಶ್ರೀ ರಹಿಮಾನ ಸಾಬ ಮೇದಿಸಾಬ ಕಿತ್ತೂರ
53) ಶ್ರೀ ಬಾಬು ಗುಡು ಸಾಬ ಮಂದಿಮನಿ
54) ಶ್ರೀ ದೇವರ ಗುರುಸಾಬ ನದಾಫ್
55) ಶ್ರೀ ಬಾಬು ಮಗನಸಾಬ ನದಾಫ್
56) ಶ್ರೀ ದಸ್ತಗೀರಸಾಬ ಹುಸೇನಸಾಬ ನದಾಫ್
57) ಶ್ರೀ ರಸೂಲ ಹುಸೇನಸಾಬ ನದಾಫ್
58) ಶ್ರೀ ದೀವಾ ಇಮಾಮಸಾಬ ಹುಲಮನಿ
59) ಶ್ರೀ ಇಮವಿಣ್ಣಾ ಮೊದಿನಸಾಬ ಹುಲಮನಿ
60) ಶ್ರೀ ದುರುಗಪ್ಪ ಶಿದ್ದಪ್ಪ ಹರಿಜನ
61) ಶ್ರೀ ಯಲ್ಲಪ್ಪ ಗಂಗಪ್ಪ ಹರಿಜನ
62) ಶ್ರೀ ಗಂಗಪ್ಪ ಯಂಕಪ್ಪ ಭೋವಿ
63) ಶ್ರೀ ಅರ್ಜುನ ಸೋಮಪ್ಪ ಭೋವಿ
64) ಶ್ರೀ ರಾಮಪ್ಪ ಗುಡಿಗಪ್ಪ ತುಬಾಕ

ಹೆಮ್ಮರ ಗಾಲದಲ್ಲಿ ಪ್ರೌಢಶಾಲಾ ಕಟ್ಟಡ ನಿರ್ಮಾಣ

588 - ಶ್ರೀ ಕೆ. ಸಿದ್ಧಯ್ಯ (ಸಂತೇಮಾರನಹಳ್ಳಿ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಂಜನಗೂಡು ತಾಲ್ಲೂಕು, ಹೆಮ್ಮರಗಾಲದ ಗ್ರಾಮಸ್ಥರು ಪ್ರೌಢಶಾಲಾ ಕಟ್ಟಡ ನಿರ್ಮಾಣಕ್ಕಾಗಿ 20,000-00 ರೂ.ಗಳನ್ನು ತಮ್ಮ ವಂತಿಗೆಯಾಗಿ ಠೇವಣಿ ಕೊಟ್ಟಿರುವುದು ಮತ್ತು ಈ ಶಾಲಾ ಕಟ್ಟಡಕ್ಕಾಗಿ ನಿವೇಶನ ಸಹ ಇರುವುದು ನಿಜವೇ?

ಆ) ಹಾಗಿದ್ದಲ್ಲಿ ಸರ್ಕಾರವು ಈ ಬಗ್ಗೆ ಯಾವಕ್ರಮ ಕೈಗೊಂಡಿದೆ?

ಇ) ಹಿಂದುಳಿದ ಪ್ರದೇಶಗಳಲ್ಲಿನ ಹಿಂದುಳಿದ ವರ್ಗಗಳವರಿಗೆ ಶಿಕ್ಷಣದ ಅವಶ್ಯಕತೆಯನ್ನು ಮನಗಂಡು ಗ್ರಾಮಸ್ಥರ ಕೋರಿಕೆಯನ್ನು ಸರ್ಕಾರವು ಪರಿಗಣಿಸುವುದೇ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಹೌದು

ಆ) ಹೆಮ್ಮರಾಲದ ಗ್ರಾಮಸ್ಥರು ನೂತನವಾಗಿ ಪ್ರೌಢಶಾಲೆ, ಕಟ್ಟಡನಿರ್ಮಾಣ ಮಾಡುವ ನಿಮಿತ್ತ ರೂ. 10,000-00 ಗಳನ್ನು ಮಾತ್ರ ಬ್ಯಾಂಕ್ ಡ್ರಾಫ್ಟ್ ಸಂಖ್ಯೆ: 924702 ಮೂಲಕ ದಿನಾಂಕ: 19-10-82 ರಲ್ಲಿ ಠೇವಣಿ ಮಾಡಿದ್ದು ಈ ಹಣವನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಈ ಶಾಖೆಯ ಮೂಲಕ ಚಲನ್ ಸಂಖ್ಯೆ: 23 ದಿನಾಂಕ: 23-11-73 ರಲ್ಲಿ ಸರ್ಕಾರಕ್ಕೆ ಪಾವತಿ ಮಾಡಲಾಗಿದೆ. ಮತ್ತು ಈ ಶಾಲಾ ಕಟ್ಟಡಕ್ಕೆಂದು 5 ಎಕರೆ ಜಮೀನನ್ನು ದಿನಾಂಕ: 18-10-72 ರಂದು ಸರ್ಕಾರದ ಪರವಾಗಿ ನಂಜನಗೂಡು ಸಹಾಯಕ ಶಿಕ್ಷಣಾಧಿಕಾರಿಗಳಿಗೆ ನಂಜನಗೂಡಿನ ಉಪ ನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಸಂಖ್ಯೆ: 2531-1972-73 ಪುಟ 1 ವಾಲ್ಯೂಂ 2531 ಪುಸ್ತಕ ಸಂಖ್ಯೆ: 2ರ ಪ್ರಕಾರ ನೊಂದಣಿಯಾಗಿರುತ್ತದೆ.

ಜಿಲ್ಲಾ ಪಂಚಾಯಿತಿಯು ಸದರಿ ಗ್ರಾಮದಲ್ಲಿ ಪ್ರೌಢಶಾಲಾ ಕಟ್ಟಡ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳುತ್ತಿದೆ.

ಇ) ಉತ್ತರ ಮೇಲಿನಂತೆ

ಉತ್ತರ ಕನ್ನಡಜಿಲ್ಲೆಯಲ್ಲಿ ಅರಣ್ಯ ಭೂಮಿಯ ಹಂಚಿಕೆ

513 - ಶ್ರೀ ಆರ್.ಎನ್. ನಾಯ್ಕ (ಭಟ್ಕಳ): ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಭೂಮಿ ಅತಿಕ್ರಮಿಸಿ ಮಂಜೂರಾತಿಗೆ ವಿನಂತಿಸಿ ಇದುವರೆಗೆ ಬಂದಿರುವ ಅರ್ಜಿಗಳೆಷ್ಟು?

ಆ) ಎಷ್ಟು ಅರ್ಜಿಗಳನ್ನು ಮಂಜೂರಾತಿಗಾಗಿ ಶಿಫಾರಸ್ಸು ಮಾಡಿದೆ?

ಇ) ಭಟ್ಕಳ್ ತಾಲ್ಲೂಕು ಹೆಬಳೆ ಗ್ರಾಮದಲ್ಲಿ ಸರ್ವೆ ನಂ. 214 ಎ ಹಿಸ್ಸಾ ನಂ. 1 ಎರಲ್ಲಿ ಯಾರ್ಯಾರು ಎಷ್ಟೆಷ್ಟು ಅತಿಕ್ರಮಣ ಮಾಡಿದ್ದಾರೆ?

ಈ) ಈ ಭೂಮಿ ಅತಿಕ್ರಮಣ ಮಾಡಿದವರ ಪೈಕಿ ಒಬ್ಬರಿಗೆ ಹೆಬಳೆ ಗ್ರಾಮ ಮ್ಯುಟೇಷನ್ ಎಂಟ್ರಿ ನಂ. 4237 ರ ಪ್ರಕಾರ 5.00 ಎಕರೆ ಜಮೀನು ಇದ್ದು ಆ ಪೈಕಿ 3.00 ಎಕರೆ ಈಗಾಗಲೇ ಅರಣ್ಯ ಭೂಮಿ ಮಂಜೂರಾತಿಯನ್ನು ಅರಣ್ಯ ಅಧಿಕಾರಿಗಳು ಅಭ್ಯಸಿಸಿದ್ದಾರೆಯೇ?

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು):

ಅ) 1978ಕ್ಕಿಂತ ಪೂರ್ವದಲ್ಲಿ ಆದ ಅರಣ್ಯ ಅತಿಕ್ರಮಣಕ್ಕೆ ಸಂಬಂಧಿಸಿ ಬಂದಿರುವ ಅರ್ಜಿಗಳ ಸಂಖ್ಯೆ: 4590

ಆ) 1978ರ ಪೂರ್ವದಲ್ಲಿ ಆಗಿರುವಂತಹ ಪ್ರಕರಣಗಳೆಂದು ಖಾತರಿ ಪಡಿಸಿಕೊಂಡು ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯಲು ಪ್ರಸ್ತಾವನೆಗಳನ್ನು ಪರಿಶೀಲಿಸಲಾಗುತ್ತಿದೆ. ಇಂಥ ಪ್ರಕರಣಗಳನ್ನು ಪರಿಶೀಲಿಸಲು ಸರ್ಕಾರದ ಆದೇಶ ಸಂಖ್ಯೆ : ಎಹೆಚ್ಎಫ್ಎಫ್ 5 ಎಫ್ಜಿಎಲ್ 90 ಭಾಗ -2) ದಿನಾಂಕ: 10-10-91ರಲ್ಲಿ ಮಾರ್ಗಸೂಚಿ ಹೊರಡಿಸಲಾಗಿದೆ.

ಇ) ಒಟ್ಟು 6 ಜನಗಳು ಅರಣ್ಯ ಜಮೀನನ್ನು ಅತಿಕ್ರಮಣ ಮಾಡಿರುತ್ತಾರೆ. ವಿವರ ಕೆಳಕಂಡಂತೆ ಇರುತ್ತದೆ.

1)	ಶ್ರೀಮತಿ ಜುಟ್ಟಮ್ಮ ಕೋಂ ಮದೇವನಾಯ್ಕ	1.28 ಎಕರೆ
2)	ಶ್ರೀ ಬಾಬುನಾಗಪ್ಪ ಹೆಬಳೆ	1.35 ಎಕರೆ
3)	ಶ್ರೀಮತಿ ಸರೋಜಿನಿ ಕೋಂ ಗಣಪತಿ ಮೊಗೆರಾ	2.35 ಎಕರೆ
4)	ಶ್ರೀ ಟಿ.ಡಿ. ಪ್ರಭು	1.18 ಎಕರೆ
5)	ಶ್ರೀ ಪುಂಡಲೀಕನಾಗಪ್ಪ ಹೆಬಳೆ	0.19 ಎಕರೆ
6)	ಹುಲಿಯಾ ಕೋಂ ಫೊರೂಕ್ ಸಾಬ್	0.02 ಎಕರೆ

ಈ) ಸದರಿ ಪ್ರದೇಶದಲ್ಲಿ ಅರಣ್ಯ ಅಧಿಕಾರಿಗಳು ಭೂಮಿ ಮಂಜೂರು ಮಾಡಿರುವುದಿಲ್ಲ. ಆದರೆ ಹೆಬಳೆ ಅರಣ್ಯ ಸರ್ವೆ ನಂ. 214 ಎ 3 ರಲ್ಲಿ ನಾಗಪ್ಪ ಈರಪ್ಪ ಜಾನ್ ಮನೆ ಇವರ ಹೆಸರಿಗೆ ಜಿಲ್ಲಾಧಿಕಾರಿ ಉತ್ತರ ಕನ್ನಡ ಕಾರವಾರವರ ಆದೇಶ ಸಂಖ್ಯೆ: ಎಫ್ಒಆರ್.ಟಿಆರ್ 6799 ದಿನಾಂಕ: 14-03-1963ರಂತೆ ಹಂಗಾಮಿ ಲಾಗಣಿಯಾಗಿ ಮಂಜೂರು ನೀಡಿದೆ. ಸದರಿಯವರು 3.00 ಎಕರೆ ಭೂಮಿಯನ್ನು ನಿಗದಿಪಡಿಸಿದ ಷರತ್ತಿನಂತೆ ಸಾಗುವಳಿ ಮಾಡಿರುವುದರಿಂದ ನಿರ್ವಣೆಕರಿಸಿ ಜಿಲ್ಲಾಧಿಕಾರಿ ಉತ್ತರ ಕನ್ನಡ ಕಾರವಾರ ಇವರ ಆದೇಶ ಸಂಖ್ಯೆ: ಎಲ್ಎನ್ಡಿ. ಇಎಸ್ಆರ್